GATWU
Reg No. ALCB-4/DRT/CUA/18/2005-06
Garments and Textile Workers Union
ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್
(Affiliated to New Trade Union Initiative - NTUI)

ದಿನಾಂಕ : 27.12.2018

ಗೆ

ಸಹಾಯಕ ನಿರ್ದೇಶಕರು,
ಕಾರ್ಖಾನೆ, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತ ಸ್ವಾಸ್ಥ್ಯ ಇಲಾಖೆ,
ವಿಭಾಗ–15
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು–560 029

ಮಾನ್ಯರೆ

ವಿಷಯ : ಕೈಗಾರಿಕಾ ವ್ಯಾಜ್ಯ ಕಾಯಿದೆಯ ಸೆಕ್ಷನ್ 9ಎ ಅನ್ನು ಉಲ್ಲಂಘಿಸಿರುವ ಬಗ್ಗೆ ಆಡಳಿತವರ್ಗಕ್ಕೆ ಬರೆದಿರುವ ಪತ್ರ.

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ ಎವೆರಿ ಡೆನಿಸನ್ ಇಂಡಿಯಾ ಪ್ರೈ.ಲಿ ಕಂಪನಿಯು 2018 ರ ರಾಷ್ಟ್ರೀಯ ಮತ್ತು ಹಬ್ಬದ ದಿನಗಳ ರಜೆಯ ಪಟ್ಟಿಯನ್ನು 2017 ರ ಡಿಸೆಂಬರ್‌ನಲ್ಲೇ ನಿರ್ಧರಿಸಿ ಘೋಷಿಸಿತ್ತು. ಈ ಪಟ್ಟಿಯಲ್ಲಿ ದಿನಾಂಕ 25.12.2018 ರಂದು ಕ್ರಿಸ್‌ಮಸ್ ರಜೆಯನ್ನು ಘೋಷಿಸಲಾಗಿತ್ತು. ಆದರೆ ದಿನಾಂಕ 21.12.2018 ರಂದು ಸುಮಾರು 5 ಗಂಟೆಯ ಸಮಯದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡು 25.12.2018 ರ ಕ್ರಿಸ್‌ಮಸ್ ರಜೆಯನ್ನು ರದ್ದುಗೊಳಿಸಿ, ಆ ರಜೆಯನ್ನು 01.01.2019 ಕ್ಕೆ ಮುಂದೂಡಿದ್ದೇವೆ ಎಂಬ ಸೂಚನೆಯನ್ನು ಸೂಚನಾ ಫಲಕದಲ್ಲಿ ಹಾಕಿರುತ್ತಾರೆ.

ಈ ನಿರ್ಧಾರವು ಕಾನೂನು ಬಾಹಿರವೆಂದು ಮತ್ತು ನಮಗೆ ಘೋಷಿಸಿದ್ದ ಕ್ರಿಸ್‌ಮಸ್ ರಜೆಯನ್ನು 25 ರಂದೇ ನೀಡಬೇಕೆಂದು GATWU ದಿನಾಂಕ 22.12.2018 ಮತ್ತು 24.12.2018 ರಂದು ಈ–ಮೇಲ್ ಮತ್ತು ರಿಜಿಸ್ಟರ್ ಅಂಚೆ ಮೂಲಕ ಕಂಪನಿಗೆ ಪತ್ರವನ್ನು ಬರೆದಿದೆ.

ತಮ್ಮ ಗಮನಕ್ಕಾಗಿ ಆ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ತಮಗೆ ಸಲ್ಲಿಸುತ್ತಿದ್ದೇವೆ.

ವಂನೆಗಳೊಂದಿಗೆ

ತಮ್ಮ ವಿಶ್ವಾಸಿ

ಪ್ರತಿಭಾ ಆರ್
(ಅಧ್ಯಕ್ಷರು)

ಕಾರ್ಖಾನೆಗಳ ಸಹಾಯಕ ನಿರ್ದೇಶಕರ ಕಛೇರಿ
ಸಂಖ್ಯೆ Adm
ದಿನಾಂಕ 26/12/18
ವಿಭಾಗ-15, ಬೆಂ

Office : # 17/1, First Floor, Near BMTC Bus Stop, New Guddadahalli, Mysore Road, Bengaluru-560 026
Ph: 080-26745242 Email : gatwu@rediffmail.com Website : www.gatwu.org.in
NTUI: B-137, 1st Floor, Dayanand Colony, Lajpatnagar-IV, New Delhi - 110 0024, Ph: 011-26486931

[redacted]